159ಎಲ್‌6
58

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ**

ಸೂಚನೆ:-

ಮಂಡ್ಯ ಜಿಲ್ಲೆಯಲ್ಲಿ ದಶಕಗಳಿಂದ ಸಾಗುವಳಿಯಲ್ಲಿರುವ ರೈತರ ಜಮೀನುಗಳ ಮೂಲ ಮಂಜೂರಾತಿ/ಹರಾಜು ಕಡತಗಳು ಸರ್ಕಾರಿ ಕಚೇರಿಗಳಲ್ಲಿ ಲಭ್ಯವಿಲ್ಲವೆಂಬ ಕಾರಣಕ್ಕೆ ನೈಜತೆಯನ್ನು ಅನುಮಾನಿಸಿ, ಮಂಜೂರಾತಿ ರದ್ದುಪಡಿಸುತ್ತಿರುವುದನ್ನು ತಡೆದು ರೈತರ ಹಿತರಕ್ಷಣೆ ಮಾಡುವ ಕುರಿತು.

ಉತ್ತರ:-

ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ಜಮೀನುಗಳು ಈ ಹಿಂದೆ ಸಾರ್ವಜನಿಕರಿಗೆ ಮಂಜೂರಾಗಿರುವ ಪ್ರಕರಣಗಳಲ್ಲಿ ಮೂಲ ಮಂಜೂರಾತಿ ಕಡತಗಳು ಲಭ್ಯವಿದ್ದಲ್ಲಿ, ಅಂತಹ ಪ್ರಕರಣಗಳನ್ನು ಆದ್ಯತೆ ಮೇರೆ ತೆಗೆದುಕೊಂಡು ದರಖಾಸ್ತು ಪೋಡಿ ಆಂದೋಲನ ಮೂಲಕ ಕ್ರಮಕೈಗೊಳ್ಳಲಾಗುತ್ತಿದೆ. ಮಂಜೂರಾತಿ ದಾಖಲೆಗಳು ಸಾರ್ವಜನಿಕರ ಬಳಿ ಲಭ್ಯವಿದ್ದು, ತಾಲ್ಲೂಕು ಕಚೇರಿಗಳಲ್ಲಿ ಲಭ್ಯವಿಲ್ಲದಂತಹ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಸಾರ್ವಜನಿಕರು ವಂಶ ಪಾರಂಪಾರ್ಯವಾಗಿ ಅನುಭವದಲ್ಲಿದ್ದು, ಆರ್. ಆರ್ ಇಂಡೆಕ್ಸ್ ಕೈಬರಹ ಪಹಣಿ ಹಾಗೂ ಆರ್. ಟಿ. ಆರ್ ಗಳಲ್ಲಿ ಹೆಸರು ನಮೂದಾಗಿದ್ದರೂ, ಕಚೇರಿಗಳಲ್ಲಿ ಮೂಲಮಂಜೂರಾತಿ/ಹರಾಜು ಕಡತಗಳಿಲ್ಲವೆಂಬ ಕಾರಣಕ್ಕೆ ನೈಜತೆಯನ್ನು ಅನುಮಾನಿಸಿ, ಖಾತೆ ರದ್ದತಿಗೆ ಯಾವುದೇ ಕ್ರಮವಹಿಸಿರುವುದಿಲ್ಲ. ಜಿಲ್ಲೆಯಲ್ಲಿ ತಹಸೀಲ್ದಾರ್ ರವರು ನಮೂನೆ 1 ರಿಂದ 5 ಸಲ್ಲಿಸುವ ಸಂಧರ್ಭದಲ್ಲಿ ಯಾವುದೇ ಒಂದು ಮಂಜೂರಾತಿ ದಾಖಲಾತಿಗಳು ಲಭ್ಯವಿಲ್ಲದಂತಹ 20706 ಪ್ರಕರಣಗಳನ್ನು ಆನ್ ಲೈನ್ ಮೂಲಕ ಉಪವಿಭಾಗಾಧಿಕಾರಿಗಳಿಗೆ ಷರಾ ನಮೂದಿಸಿ ರವಾನಿಸಿರುತ್ತಾರೆ. ಜಿಲ್ಲೆಯಲ್ಲಿ ದರಖಾಸ್ತು ಪೋಡಿ ಆಂದೋಲನದ ಮೂಲಕ ದುರಸ್ತಿ ಪ್ರಕ್ರಿಯೆಯನ್ನು ಸಮರ್ಪಕವಾಗಿ ಮಾಡಲಾಗುತ್ತಿದ್ದು, ಸರ್ಕಾರದ ಆದೇಶದ ಸಂಖ್ಯೆ: ಕಂ.ಇ.156, ಎಸ್.ಎಸ್.ಎಂ.2024, ದಿನಾಂಕ: 25-11-2024 ರಲ್ಲಿನ ನಿರ್ದೇಶನಗಳಂತೆ ಸ್ವಯಂ ಪ್ರೇರಿತವಾಗಿ ದುರಸ್ತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಈಗಾಗಲೇ 2453 ಪ್ರಕರಣಗಳಲ್ಲಿ ದುರಸ್ತಿ ಕಾರ್ಯ ನಡೆಸಿ 1214 ಪ್ರಕರಣಗಳಲ್ಲಿ ಆರ್.ಟಿ.ಸಿ ಇಂಡೀಕರಿಸಲಾಗಿರುತ್ತದೆ ಹಾಗೂ ಮಂಜೂರಾತಿ ದಾಖಲೆಗಳು ಲಭ್ಯವಿಲ್ಲದ ಪ್ರಕರಣಗಳು ಉಪವಿಭಾಗಾಧಿಕಾರಿ ಹಾಗೂ ತಹಸೀಲ್ದಾರ್ ರವರ ಹಂತದಲ್ಲಿ ಪರಿಶೀಲನೆಯಲ್ಲಿದೆ. ಸರ್ಕಾರಿ ಜಮೀನು ಮಂಜೂರಾಗಿ ಈವರೆಗೂ ದುರಸ್ತಿಯಾಗದೇ ಇರುವ ಪ್ರಕರಣಗಳನ್ನು ಸರ್ಕಾರದ ಆದೇಶದ ಸಂಖ್ಯೆ: ಕಂ.ಇ. 156 ಎಸ್.ಎಸ್.ಎಂ.2024, ದಿನಾಂಕ: 25-11-2024 ರಲ್ಲಿನ ನಿರ್ದೇಶನಗಳಂತೆ ಸ್ವಯಂ ಪ್ರೇರಿತವಾಗಿ ದುರಸ್ತಿ ಮಾಡಿಕೊಡಲಾಗುತ್ತಿದೆ. ಆದರೆ ಯಾವುದೇ ಒಂದು ಮಂಜೂರಾತಿ ದಾಖಲೆ ಇಲ್ಲದ ಪ್ರಕರಣಗಳಲ್ಲಿ ದುರಸ್ತಿಗೆ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಇಂತಹ ರೈತರನ್ನು ಒಕ್ಕಲೆಬ್ಬಿಸುವ ಹಾಗೂ ಖಾತೆ ರದ್ದುಪಡಿಸಲು ಯಾವುದೇ ಕ್ರಮವಹಿಸಿರುವುದಿಲ್ಲ.

(ಆರ್‌ಡಿ 52 ಎಲ್‌ಜಿಎಮ್ 2026)

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ